## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** 2019-20ನೇ ಸಾಲಿನ ಮಾರ್ಚ್-2020ರ ವರೆಗಿನ ನಾಲ್ಕನೇ ತ್ರೈಮಾಸಿಕ ಸಾಲದ ಕಂತು ಮತ್ತು ಬಡ್ಡಿಯನ್ನು ಹುಡ್ಕೋ ಸಂಸ್ಥೆಗೆ ಮರುಪಾವತಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ ಆದೇಶ.

**ಓದಲಾಗಿದೆ:** ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಪತ್ರ ಸಂಖ್ಯೆ: ಬಿ5ಸಿ/22/2019-20, ದಿನಾಂಕ:04.02.2020.

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ, ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ 2019-20ನೇ ಸಾಲಿನ ಆಯವ್ಯಯದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲದ ಕಂತು ಮತ್ತು ಬಡ್ಡಿ ಮರುಪಾವತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಲ್ಲಿ ಒಟ್ಟು ರೂ.351.00 ಲಕ್ಷಗಳನ್ನು ಒದಗಿಸಲಾಗಿರುವುದಾಗಿ ತಿಳಿಸಿರುತ್ತಾರೆ.

1. 4055-00-211-0-01-240 NP Debt Servicing-Principal 308.00 lakhs
2. 2055-00-113-0-03-240 NP Debt Servicing-Int. Repayment 43.00 lakhs

**Total 351.00**

2020ನೇ ಮಾರ್ಚ್ ತಿಂಗಳಿನ ಅಂತ್ಯಕ್ಕೆ ಹುಡ್ಕೋ ಸಂಸ್ಥೆಗೆ ನಾಲ್ಕನೇ ತ್ರೈಮಾಸಿಕ ಕಂತಿನ ಸಾಲ ಮತ್ತು ಬಡ್ಡಿ ಮರುಪಾವತಿ ಮಾಡಲು ಕೆಳಗಿನ ವಿವರಗಳಂತೆ ನಿಗಮಕ್ಕೆ ಒಟ್ಟು ರೂ.84,43,833/- ಗಳು ಬೇಕಾಗಿರುವುದಾಗಿ ತಿಳಿಸಿರುತ್ತಾರೆ.

ರೂ.ಗಳಲ್ಲಿ

| | |
|---|---|
| ಸಾಲದ ಕಂತು ಪಾವತಿಗಾಗಿ | ರೂ.76,95,840.00 |
| ಸಾಲದ ಮೇಲಿನ ಬಡ್ಡಿ ಮರುಪಾವತಿಗಾಗಿ | ರೂ. 7,47,993.00 |
| **2019-20ನೇ 4ನೇ ತ್ರೈಮಾಸಿಕ ಕಂತಿನ ಮರುಪಾವತಿಗೆ ಬೇಕಾದ ಒಟ್ಟು ಮೊತ್ತ** | **ರೂ. 84,48,833.00** |

ಈಗಾಗಲೇ ಸರ್ಕಾರವು 2019-20ನೇ ಸಾಲಿನ ಮೊದಲನೇ ಎರಡನೇ & ಮೂರನೇ ತ್ರೈಮಾಸಿಕ ಸಾಲದ ಕಂತು ಮತ್ತು ಬಡ್ಡಿಯನ್ನು ಮರುಪಾವತಿ ಮಾಡಲು ಒಟ್ಟು ರೂ.2,64,67,955/- ಗಳನ್ನು ನಿಗಮಕ್ಕೆ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿರುತ್ತದೆಂದು ತಿಳಿಸುತ್ತಾ, ಈ ಅನುದಾನಕ್ಕೆ ಉಪಯುಕ್ತತಾ ಪ್ರಮಾಣ ಪತ್ರವನ್ನು ಒದಗಿಸಿರುತ್ತಾರೆ. (Subject to receipt of 3rd Quarter grant from SHT) ನಿಗಧಿತ ಅವಧಿಯಲ್ಲಿ ಹುಡ್ಕೊ ಸಂಸ್ಥೆಗೆ ಮರುಪಾವತಿ ಮಾಡದೇ ಹೋದಲ್ಲಿ ದಂಡ ಮತ್ತು ಸುಸ್ತಿ ಬಡ್ಡಿಯನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗಿರುತ್ತದೆ ಎಂದು, ಸರ್ಕಾರಿ ಆದೇಶ ಸಂಖ್ಯೆ:ಎಫ್ ಡಿ 01 ಟಿಎಫ್ ಪಿ



Scanned with CamScanner

2019, ದಿನಾಂಕ 04.07.2019 (ಸಾಲ ಸೇವೆಗಳು) ಪ್ಯಾರ 14ರ ಪ್ರಕಾರ ಆಯವ್ಯಯದ ಹಣದ ಲಭ್ಯತೆಗೆ ಒಳಪಟ್ಟು ಸಾಲಗಳ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಗುಣವಾಗಿ ಪೂರ್ಣ ಆರ್ಥಿಕ ವರ್ಷದಲ್ಲಿ ಸಾಲ ಪಾವತಿಗಾಗಿ ಆರ್ಥಿಕ ಇಲಾಖೆಯ ಅನುಮತಿ ಇದೆಯೆಂದು ಭಾವಿಸಿ, ಸಾಲದ ಮರುಪಾವತಿ ಮಾಡುವ ಸಲುವಾಗಿ ತ್ರೈಮಾಸಿಕ ಕಂತುಗಳನ್ನು ಗೃಹ ಇಲಾಖೆಯೇ ಹಣ ಬಿಡುಗಡೆ ಮಾಡಲು ಆದೇಶ ಹೊರಡಿಸಲು ಅವಕಾಶವಿದೆ ಎಂದು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ ಎಂದು ವರದಿ ಮಾಡಿರುತ್ತಾರೆ.

ಆದ್ದರಿಂದ, 2019-20ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಅನುದಾನದಲ್ಲಿ ಲೆಕ್ಕ ಶೀರ್ಷಿಕೆ 4055-00-211-0-01-240 ಸಾಲ ಮೇಲ್ತುವಾರಿ (NP) Charged ರಡಿಯಲ್ಲಿ ಸಾಲದ ಕಂತನ್ನು ಪಾವತಿಸಲು ರೂ.76,95,840/- ಮತ್ತು ಲೆಕ್ಕ ಶೀರ್ಷಿಕೆ 2055-00-113-0-03-240 ಸಾಲ ಮೇಲ್ತುವಾರಿ (NP) Charged ರಡಿಯಲ್ಲಿ ರೂ.7,47,993/- ಬಡ್ಡಿಯನ್ನು ಸಹ ಹುಡ್ಕೋ ಸಂಸ್ಥೆಗೆ ಪಾವತಿಸಲು ಒಟ್ಟಾರೆ ರೂ.88,43,833/- ಗಳನ್ನು ಕೆ.ಎಸ್.ಪಿ.ಹೆಚ್. ಮತ್ತು ಐ.ಡಿ.ಸಿ.ಎಲ್., ಬೆಂಗಳೂರು ರವರ ಹಣ ಸಂದಾಯಿತ ರಸೀದಿಯ ಮೂಲಕ ಮಾನ್ಯ ಡಿಜಿ ಮತ್ತು ಐಜಿಪಿ ರವರ ಮೇಲು ರುಜುವಿನೊಂದಿಗೆ ಖಜಾನೆಯಿಂದ ಹಣವನ್ನು ಸೆಳೆದು ನಿಗಮದಲ್ಲಿ ಠೇವಣಿ ಇಡಲು ಅನುದಾನ ಬಿಡುಗಡೆ ಮಾಡಿ, ಸರ್ಕಾರದ ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 04 ಇಎಫ್‌ಎಸ್ 2019, ಬೆಂಗಳೂರು,**

**ದಿನಾಂಕ: 21/ಮಾರ್ಚ್/2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತವು ಪೊಲೀಸ್ ವಸತಿ ನಿರ್ಮಾಣಕ್ಕಾಗಿ ಮಾರ್ಚ್ 2020ರ ಅಂತ್ಯಕ್ಕೆ ಹುಡ್ಕೋ ಸಂಸ್ಥೆಗೆ ಪಾವತಿಸಬೇಕಾದ ನಾಲ್ಕನೇ ತ್ರೈಮಾಸಿಕ ಕಂತಿನ ಸಾಲದ ಮೊತ್ತ ರೂ.76,95,840/- ಗಳನ್ನು (ಎಪ್ಪತ್ತಾರು ಲಕ್ಷ ತೊಂಬತ್ತೈದು ಸಾವಿರದ ಎಂಟು ನೂರ ನಲವತ್ತು ರೂಪಾಯಿಗಳು ಮಾತ್ರ) ಹಾಗೂ 2019-20ನೇ ಸಾಲಿನ ಲೆಕ್ಕಶೀರ್ಷಿಕೆ 4055-00-211-0-01-240-ಸಾಲ ಮೇಲುಸ್ತುವಾರಿ ಅಡಿ ಭರಿಸಿ, ಸಾಲದ ಮೇಲಿನ ಬಡ್ಡಿ ಮೊತ್ತ ರೂ.7,47,993/- ಗಳನ್ನು (ಏಳು ಲಕ್ಷ ನಲವತ್ತೇಳು ಸಾವಿರದ ಒಂಭೈನೂರ ತೊಂಬತ್ಮೂರು ರೂಪಾಯಿಗಳು ಮಾತ್ರ) ಮತ್ತು 2019-20ನೇ ಸಾಲಿನ ಲೆಕ್ಕಶೀರ್ಷಿಕೆ 2055-00-113-0-03-240-ಸಾಲ ಮೇಲುಸ್ತುವಾರಿ ಅಡಿ ಭರಿಸಲು ಒಟ್ಟು ರೂ.84,43,833/- ಗಳನ್ನು (ಎಂಬತ್ತನಾಲ್ಕು ಲಕ್ಷ ನಲವತ್ಮೂರು ಸಾವಿರದ ಎಂಟು ನೂರ ಮೂವತ್ಮೂರು ರೂಪಾಯಿಗಳು ಮಾತ್ರ) ಬಿಡುಗಡೆ ಮಾಡಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

-3

Scanned with CamScanner

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ:ಒಸಾಇ 94 ಆಂಆಸ-ಎ 2019, ದಿನಾಂಕ:29/02/2020ರ ಸಹಮತಿಯನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 01 ಟಿಎಫ್‌ಪಿ 2019 ದಿನಾಂಕ:13/01/2020 ರಲ್ಲಿ ಇಲಾಖಾ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

21/3/2020

[ಬಿ.ಎನ್.ದೇವರಾಜ್]
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ವೆಚ್ಚ)

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್.ಎಸ್.ಎ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಮಹಾಲೇಖಪಾಲರು (ಇ & ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
3. ಮಹಾಲೇಖಪಾಲರು (ಎ&ಇ) ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329 /5369, ಬೆಂಗಳೂರು-560 001.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ನೃಪತುಂಗ ರಸ್ತೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ನಿಗಮ ನಿಯಮಿತ, ಬೆಂಗಳೂರು.
6. ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಇಲಾಖೆ, ಬಹುಮಹಡಿ ಕಟ್ಟಡ ಬೆಂಗಳೂರು.
7. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು.
8. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-11), ವಿಧಾನಸೌಧ.
10. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಸಮನ್ವಯ), ವಿಧಾನಸೌಧ.
11. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

4:40 PM
21/3/2020 ಹೊರಡಿಸಿದೆ
23/3/2020